# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ ಜ್ಯೇಷ್ಠ ಮೇ ೨೦೦೯ ಸಂಪುಟ–೩ ಸಂಚಿಕೆ–೫


ಗುರುವಾಣಿ

## ಅಮಂಗಲ ಯಾತ್ರೆಗಳ ಅಂತ್ಯವನ್ನು ಉದ್ದೇಶಿಸಿ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ



### ಹೂರಣ


ಗುರುವಾಣಿ

ಎರಡನೆಯ ಸ್ವಾತಂತ್ರ್ಯ ಸಂಗ್ರಾಮ ಕೊನೆಯದು ಕೂಡ ಆಗಲಿ

ಪ್ರಶ್ನೋತ್ತರ

ಮಾಸದ ಗೋವು: ನಾಗೋರಿ

ಸುಸಂಸ್ಕೃತ ಮಜ್ಜಿಗೆಯೂ ನಮ್ಮ ಸಂಸ್ಕೃತಿಯೂ...

ಕಾಮದುಘಾ ಕ್ರಮಿಸಿದ ಹಾದಿ



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ಸನ್ನಿಹಿತವಾಗುತ್ತಿದೆ. ಗೋವು, ಗ್ರಾಮಗಳ ಕಡೆಗೆ ಮತ್ತೆ ಮರಳಿ, ಭರತ ಭೂಮಿಯ ಸೊಬಗನ್ನು ಸವಿಯುವ ಗಳಿಗೆ ಹತ್ತಿರ–ಹತ್ತಿರಕ್ಕೆ ಬರುತ್ತಿದೆ.

ನಮಗೆ ಯಾತ್ರೆಗಳು ವಿಶೇಷವಲ್ಲ. ಏಕೆಂದರೆ ದಿನ ಬೆಳಗಾದರೆ ಸಾಲು–ಸಾಲು ಯಾತ್ರೆಗಳು ಕಣ್ಣಮುಂದೆ ಹಾದು ಹೋಗುತ್ತವೆ. ವ್ಯತ್ಯಾಸ ಇಷ್ಟೇ. ಬರಲಿರುವುದು ಮಹಾಮಂಗಳ ಯಾತ್ರೆಯಾದರೆ, ಇವು ಅಮಂಗಳ ಯಾತ್ರಾ ಸರಣಿಗಳು. ಗೋವುಗಳನ್ನು ಕಸಾಯಿಗೆ ಸಾಗಿಸುವ ಯಾತ್ರೆಗಳು ಇವು. ಯಾವುದೇ ದಯ–ದಾಕ್ಷಿಣ್ಯವಿಲ್ಲದೇ, ಹಸುಗಳನ್ನು ಟ್ರಕ್ಕುಗಳಲ್ಲಿ ಒತ್ತೊತ್ತಾಗಿ ತುಂಬಿ, ಕಸಾಯಿ ಖಾನೆಗಳಿಗೆ ಸಾಗಿಸಿ, ಅವುಗಳ ಮಾರಣ ಹೋಮಕ್ಕೆ ಕಾರಣವಾಗುವ ಪರಿ ಹೃದಯ ವಿದ್ರಾವಕ. ಅದು ನಿಲ್ಲದಿದ್ದರೆ ನಮ್ಮಗಳ ಉಳಿವು ಅನುಮಾನಾಸ್ಪದ ವಿಷಯವೇ ಆಗಿದೆ. ಒಂದು ಗೋವು ನಮ್ಮಗಳ ದಿನ ನಿತ್ಯದ ಜೀವನದಲ್ಲಿ ಹಾಸು–ಹೊಕ್ಕಾಗಿರುವ ಪರಿಗೆ ಧಕ್ಕೆಯಾದರೆ, ಮತ್ತೊಂದು ನಮ್ಮಗಳ ಮನೋಭಾವದ ಋಣಾತ್ಮಕ ಗತಿಯಿಂದಾಗಿ ನಾವು–ನಾವುಗಳೇ ಪರಸ್ಪರ ಕಿತ್ತು ತಿನ್ನುವ ಸನ್ನಿವೇಶಕ್ಕೆ ತುತ್ತಾಗುತ್ತಿದ್ದೇವೆ.

ಹಾಗಾಗುವುದು ಒಳ್ಳೆಯದಲ್ಲ ಅಲ್ಲವೇ ? ಅದಕ್ಕಾಗಿ ಪರಿಸ್ಥಿತಿಯನ್ನು ಸುಧಾರಿಸಿಕೊಂಡು, ಅಲ್ಲಿಂದ ಮೇಲೆ ಬರಲು ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯನ್ನು ಸಂಕಲ್ಪಿಸಿ ಆಗಿದೆ. ಹೆಸರೇ ಹೇಳುವಂತೆ ಈ ಯಾತ್ರೆ ನಾವು ದಿನನಿತ್ಯ ನೋಡುವ ಅಮಂಗಲ ಯಾತ್ರೆಗಳಂತಿರದೇ, ಸಮಗ್ರ ವಿಶ್ವದ ಮಂಗಲದ ಸಂದೇಶವನ್ನು ಹೊತ್ತು ಭಾರತದ ನರನಾಡಿಗಳನ್ನು ಜಾಗೃತಗೊಳಿಸಲಿದೆ.

ಇದರ ಬೀಜಾವಾಪ ಆಗಿದ್ದು ೨೦೦೭ರ ವಿಶ್ವ ಗೋ ಸಮ್ಮೇಳನದಲ್ಲಿ. ಅಲ್ಲಿ ಭಿನ್ನ–ವಿಭಿನ್ನ ಗೋ ಭಕ್ತರು ಒಂದೆಡೆ ಸೇರಿ ವಿಶ್ವ ಮಂಗಲದ ಸಂಕಲ್ಪವನ್ನು ತೊಟ್ಟರು. ಇಲ್ಲಿ ಸಂಕಲ್ಪ ಕೈಗೊಂಡ ಗೋ ಭಕ್ತರು ಭಾರತದ ಮೂಲೆ–ಮೂಲೆಗಳಲ್ಲಿ ಸಂಚರಿಸಿ, ಗೋ ಆಧಾರಿತ ಗ್ರಾಮ ಜೀವನದ ಶ್ರೀಮಂತಿಕೆಯನ್ನು ಪರಿಚಯಿಸಿ, ಅಂತೆಯೇ ಬದುಕಲು ಸ್ಫೂರ್ತಿ ತುಂಬಲಿದ್ದಾರೆ.

ಇದರಲ್ಲಿ ಅವರಿವರೆನ್ನದೇ ಸಮಸ್ತರೂ ಭಾಗವಹಿಸುವ ಅನಿವಾರ್ಯತೆ, ಅಗತ್ಯತೆ ಎಲ್ಲವೂ ಇದೆ. ಏಕೆಂದರೆ ಈ ಯಾತ್ರೆ ಎಲ್ಲರ ದಿನ ನಿತ್ಯದ ಬದುಕನ್ನು ಸುಂದರಗೊಳಿಸಲು ಹೊರಡುತ್ತಿದೆ.

ಹಾಗೆಂದು ರಾಷ್ಟ್ರದ ಪ್ರತಿಯೊಬ್ಬರೂ ತಮ್ಮ ಕರ್ತವ್ಯ, ಜವಾಬ್ದಾರಿಗಳನ್ನು ಅಲ್ಲಲ್ಲಿಯೇ ಕಳಚಿ, ಘೋಷಣೆಗಳನ್ನು ಕೂಗುತ್ತಾ ದೊಡ್ಡ–ದೊಡ್ಡ ಮೆರವಣಿಗೆಗಳನ್ನು ಸಂಘಟಿಸಬೇಕು ಎಂಬುದನ್ನು ಪ್ರತಿಪಾದಿಸುತ್ತಿಲ್ಲ. ನಿರ್ವಹಿಸುತ್ತಿರುವ ಕಾರ್ಯವು ಸುಂದರ ಜೀವನ ನಿರ್ಮಾಣದ ಸಂಕಲ್ಪಕ್ಕೆ ನೀರೆರೆಯುವ ಕಾಳಜಿ ಬೆಳೆಸುವಂತೆ ನೋಡಿಕೊಳ್ಳಿ ಎಂಬುದನ್ನು ಹೇಳಬಯಸುತ್ತೇವೆ.

ಯಾತ್ರೆ ನಿಮ್ಮಲ್ಲಿಗೂ ಬರಲಿದೆ. ಆಗ ನೀವೂ ನಮ್ಮೊಂದಿಗಿರಿ. ಸತ್ಸಂಕಲ್ಪವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳೋಣ. ಮತ್ತಷ್ಟು ಜನರನ್ನು ಒಳಗೊಳಿಸಿಕೊಳ್ಳೋಣ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

# ಎರಡನೆಯ ಸ್ವಾತಂತ್ರ್ಯ ಸಂಗ್ರಾಮ ಕೊನೆಯದು ಕೂಡ ಆಗಲಿ

ಯಾರೊಬ್ಬರ ಬಂಧನಕ್ಕೂ ಒಳಗಾಗದೇ ಸ್ವಚ್ಛಂದವಾಗಿ ಬದುಕುವ ಕನಸು ಎಲ್ಲರದು. ಅದಕ್ಕೆ ಧಕ್ಕೆಯಾದರೆ ಶಕ್ತಿ ಮೀರಿ ಪ್ರಯತ್ನಿಸಲೂ ಸೈ. ಆ ನೆಲೆಗಟ್ಟಿನಲ್ಲಿ ೧೮೫೭ರಲ್ಲಿ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು. ಕಳೆದುಕೊಂಡ ಸ್ವಾತಂತ್ರ್ಯವನ್ನು ಗಳಿಸುವ ಕುದಿಯಲ್ಲಿ ಶುರುವಾಯಿತು. ಕಾಡತೂಸುಗಳಲ್ಲಿ ಗೋವು ಮತ್ತು ಹಂದಿ ಮಾಂಸದ ಕೊಬ್ಬು ಬಳಸುತ್ತಾರೆ ಎಂಬ ಸಂಗತಿ ಆ ಕುದಿಗೆ ಕಿಚ್ಚನ್ನು ಹಚ್ಚಿತು. ಇನ್ನೇನು ಭಾರತ ವಿದೇಶೀಯರ ದಾಸ್ಯದಿಂದ ಮುಕ್ತವಾಗಿಯೇ ಹೋಗುತ್ತದೆ ಎನ್ನುವಷ್ಟರಲ್ಲಿ ಕುದಿ-ಕಿಚ್ಚುಗಳನ್ನು ಅಲ್ಲಲ್ಲಿಯೇ ಮೆಟ್ಟಿಹಾಕಲಾಯಿತು.




ಗಾಂಧೀ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬರುವವರೆಗೂ ಅಲ್ಲಲ್ಲಿ ಆಂದೋಲನಗಳು, ಪ್ರತಿಭಟನೆಗಳು, ಹೋರಾಟ, ಹತ್ಯೆ ಮೊದಲಾದ ಅಸ್ತ್ರಗಳು ಪ್ರಯೋಗವಾಗುತ್ತಲೇ ಇದ್ದವು. ಯಾರೊಬ್ಬರಿಗೂ ಅಕಸ್ಮಾತ್ ಸ್ವಾತಂತ್ರ್ಯ ಬಂದರೆ ಮುಂದೇನು? ಎಂಬ ಕಲ್ಪನೆ ಇದ್ದಂತಿರಲಿಲ್ಲ. ಆದರೆ, ಗಾಂಧೀ ಸ್ವತಂತ್ರಗೊಂಡ ನಂತರ ಏನಾಗಬೇಕು ಎಂಬುದನ್ನು ಸ್ಪಷ್ಟವಾಗಿ ಬಿಚ್ಚಿಟ್ಟರು. ಅದು ಭಾರತೀಯರಲ್ಲಿ ಸ್ವಾತಂತ್ರ್ಯ ಪಡೆಯುವ ಕನಸು, ಆಕಾಂಕ್ಷೆಯನ್ನು ಬಲವಾಗಿ ಬಿತ್ತಿತು. ರೈತ, ಕಾರ್ಮಿಕ, ಪತ್ರಕರ್ತ, ಕಲಾವಿದ, ಶ್ರೀಸಾಮನ್ಯ ಎಲ್ಲರೂ ತಂತಮ್ಮ ಕಾರ್ಯ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಮರ್ಪಿತವಾಗುತ್ತಿದೆ ಎಂದು ಭಾವಿಸತೊಡಗಿದರು. ೧೯೪೭ರ ಆಗಸ್ಟ್ ೧೫ರಂದು ಸ್ವಾತಂತ್ರ್ಯವನ್ನೂ ಗಳಿಸಿದೆವು.

ಖುಷಿಯ ಮಗ್ಗುಲಿಗೇ ಭ್ರಮನಿರಸನ ಕಾದು ಕೂತಿತ್ತು. ನಮ್ಮ ರಾಷ್ಟ್ರಪಿತ ಗಾಂಧೀಜಿಯವರ ಗ್ರಾಮರಾಜ್ಯ ರಾಮರಾಜ್ಯವೆಂಬ ಕನಸು ನಿಜವಾಗಿಯೂ ಕನಸಿಗೆ ಹತ್ತಿರವಾಗುತ್ತಾ ಹೋಯಿತು. ಕೃಷಿ, ಹೈನುಗಾರಿಕೆ, ಗುಡಿ ಕೈಗಾರಿಕೆ ಪ್ರತಿ ಹಳ್ಳಿಯಲ್ಲೂ ಬೆಳೆದು ಗ್ರಾಮಗಳು ಸ್ವಾವಲಂಬಿಯಾಗಬೇಕು. ಬೇರೆಡೆಗಳ ನಕಲು ಬೇಡ. ಗ್ರಾಮಗಳು ಅವುಗಳ ಸ್ವಂತಿಕೆಯನ್ನು ಮೆರೆಯಲಿ ಎಂಬುದು ಗಾಂಧೀ ಕಂಡ ಗ್ರಾಮರಾಜ್ಯದ ಕನಸಾಗಿತ್ತು. ಅದು ಅಷ್ಟು ಗಟ್ಟಿಯಾಗಿದ್ದರೂ ಕನಸಾಗಿಯೇ ಉಳಿದದ್ದು ಏಕೆ ಅರ್ಥವಾಗುವುದಿಲ್ಲ.

ದೇಶದ ಸ್ವಾತಂತ್ರ್ಯದೊಟ್ಟಿಗೆ ದೇಶ ವಿಭಜನೆಯಾಗಿ, ಫಲವತ್ತಾದ ಭೂಮಿಯ ಬಹುಭಾಗ ಪಾಕಿಸ್ತಾನದ ವಶವಾಯಿತು. ಅದರೊಟ್ಟಿಗೆ ಸೇರಿಕೊಂಡ ಅತಿವೃಷ್ಟಿ, ಅನಾವೃಷ್ಟಿ ಆಹಾರ ಕೊರತೆಯನ್ನು ಭೀಕರವಾಗಿಸಿತು. ಆಗ ತಕ್ಷಣದ ಪರಿಹಾರ ಅನಿವಾರ್ಯವೆನಿಸಿತು.

ಆ ಸನ್ನಿವೇಶದಲ್ಲಿ ಆಶಾಕಿರಣವಾಗಿ ಕಂಡದ್ದು ವಿದೇಶೀ ವಿಧಾನ, ತಂತ್ರಜ್ಞಾನ. ಅಂದರೆ ಉಳುಮೆ-ಕಟಾವಿಗೆ ಟ್ರಾಕ್ಟರ್-ಟಿಲ್ಲರ್ ಬಳಕೆ, ಹೈಬ್ರಿಡ್ ಬೀಜಗಳು, ರಸಗೊಬ್ಬರ, ಕೀಟನಾಶಕ, ಭಾರೀ ಅಣೆಕಟ್ಟುಗಳ ಕಾಲುವೆಗಳಿಂದ ನೀರಿನ ಸರಬರಾಜು, ವರ್ಷಕ್ಕೆ ಮೂರು ಬೆಳೆ, ಭೂಮಿಯ ಗುಣ ಹೇಗೇ ಇರಲಿ ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿರುವ ಬೆಳೆ ಬೆಳೆಯುವುದು, ಹೊಲ-ಗದ್ದೆಗಳನ್ನು ಹೊಡೆದು ತೋಟ ಮಾಡುವುದು, ಸಾಲ ಎತ್ತಿ ಬೇಸಾಯ ಮಾಡುವುದು, ಎತ್ತು-ಹೋರಿ-ಬರಡು ದನಗಳನ್ನು ಕಟುಕರಿಗೆ ಮಾರುವುದು, ಹೆಚ್ಚು ಹಾಲಿಗಾಗಿ ಜೆರ್ಸಿ, ಎಚ್.ಎಫ್. ದನಗಳನ್ನು ಸಾಕುವುದು ಸಾರ್ವತ್ರಿಕವಾಗುತ್ತಾ ಹೋಯಿತು. ಅದಾದ ಕೆಲವೇ ವರ್ಷಗಳಲ್ಲಿ ಹಸಿರು ಕ್ರಾಂತಿ, ಕ್ಷೀರ ಕ್ರಾಂತಿ ಒಂದರ ಹಿಂದೆ ಮತ್ತೊಂದು ಎಂದು ಭುರುಗುಟ್ಟಿಕೊಂಡು ಬಂದವು. ಆಹಾರ, ಹಾಲು ಹೇಗಿದೆ? ಅದು ಪ್ರಶ್ನೆಯೇ ಅಲ್ಲ. ಎಷ್ಟು ಹೆಚ್ಚಾಗಿದೆ ಎಂಬುದೇ ಬಿಸಿಬಿಸಿ ಸುದ್ದಿಯಾಗಿತ್ತು.

ಪುಟ 6 ನೋಡಿ

# ಪ್ರಶ್ನೋತ್ತರ

ಪ್ರ: ನಮ್ಮ ದೇಶದಲ್ಲಿ ಎಷ್ಟು ಗೋಬರ್ ಗ್ಯಾಸ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ?

ಉ: ಅಸಾಂಪ್ರದಾಯಿಕ ಇಂಧನ ಮೂಲಗಳ ಇಲಾಖೆ ಭಾರತದಲ್ಲಿ ೧ ಕೋಟಿ ೨೦ ಲಕ್ಷ ಗೋಬರ್ ಗ್ಯಾಸ್ ಸ್ಥಾವರಗಳನ್ನು ಸ್ಥಾಪಿಸಬಹುದಾಗಿದೆ. ಆದರೆ ಇದುವರೆಗೆ ಶೇ ೩೦ ರಷ್ಟು ಸ್ಥಾವರಗಳನ್ನು ಮಾತ್ರ ಸ್ಥಾಪಿಸಲಾಗಿದೆ. ಹಾಗಾಗಿ ಅಪಾರ ಪ್ರಮಾಣದ ಸಗಣಿ ಸಂಪನ್ಮೂಲ ವ್ಯರ್ಥವಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೆಚ್ಚು ವೇಗವಾಗಿ ಈ ಯೋಜನೆಯನ್ನು ಜಾರಿಗೊಳಿಸಿದರೆ ನಮ್ಮ ಗೋ ಸಂಪತ್ತಿನ ಸಮರ್ಥ ಬಳಕೆ ಸಾದ್ಯವಾಗುತ್ತದೆ. ಕಸಾಯಿಖಾನೆಗಳ ಸ್ಥಾಪನೆಗಿಂತ ಗೋಬರ್ ಗ್ಯಾಸ್ ಸ್ಥಾವರಗಳ ಸ್ಥಾಪನೆ ದೇಶಕ್ಕೆ ಹಿತಕರ ಅಲ್ಲವೇ?

ಪ್ರ: ಮುಸಲ್ಮಾನರಿಗೆ ಗೋ ಹತ್ಯೆ ಮತ್ತು ಗೋ ಮಾಂಸದ ಭಕ್ಷಣೆ ಧಾರ್ಮಿಕ ಅವಶ್ಯಕತೆ ಎನ್ನುತ್ತಾರಲ್ಲ?

ಉ: ೨೬-೧೦-೨೦೦೫ ರಂದು ಸುಪ್ರೀಂ ಕೋರ್ಟಿನ ಸಂವಿಧಾನ ಪೀಠವು ಗೋ ಹತ್ಯಾ ನಿಷೇಧದ ಸಂಬಂಧ ನೀಡಿದ ತೀರ್ಪಿನಲ್ಲಿ ಬಕ್ರೀದ್ ಹಬ್ಬದ ದಿನ ಹಸುವನ್ನು ಬಲಿ ಕೊಡುವುದು ಮುಸಲ್ಮಾನರಿಗೆ ಕಡ್ಡಾಯ ಎಂಬ ವಾದಕ್ಕೆ ಯಾವುದೇ ಧಾರ್ಮಿಕ ಸಾಕ್ಷಿ ಪುರಾವೆಗಳಿಲ್ಲ ಎಂದು ತಳ್ಳಿ ಹಾಕಿದೆ. ಅದಕ್ಕೆ ವಿರುದ್ಧವಾಗಿ ಬಾಬರ್, ಹುಮಾಯೂನ್, ಅಕ್ಬರ್, ಜಹಾಂಗೀರ್ ಮುಂತಾದ ಮೊಗಲ್ ಸಾಮ್ರಾಟರು ಗೋ ಹತ್ಯೆ ಮಾಡುವವರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸುತ್ತಿದ್ದರು. ಮೈಸೂರಿನ ನವಾಬ್ ಹೈದರ್ ಆಲಿ, ಗೋ ಹತ್ಯೆ ಮಾಡುವವರ ಕೈಗಳನ್ನು ಕತ್ತರಿಸಬೇಕೆಂದು ಶಾಸನ ವಿಧಿಸಿದ್ದ ಎಂದು ತಿಳಿಸುತ್ತದೆ.

**- ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ನಾಗೋರಿ

ಭಾರತೀಯ ಗೋ ವಂಶದೆಡೆಗೆ ಕೊಂಚ ಕುತೂಹಲ ನಿಮಗಿದ್ದರೂ ಸಾಕು, ಭಾರತೀಯ ಕೃಷಿ ಪದ್ಧತಿಯಲ್ಲಿನ ಮಹತ್ತು ನಿಮ್ಮ ಅರಿವಿಗೆ ಬರತೊಡಗಿ, ಸ್ವಾಭಿಮಾನದ ಪುಳಕವೊಂದು ನಿಮಗುಂಟಾಗುತ್ತದೆ. ಅಳಿದೇ ಹೋದಂತಿರುವ ಅನೇಕ ತಳಿಗಳು, ಅವುಗಳ ವೈಶಿಷ್ಟ್ಯಗಳ ಅಧ್ಯಯನ, ಇತಿಹಾಸದ ಪುಟಗಳನ್ನು ನಿಮ್ಮ ಕಣ್ಣಮುಂದೆ ತೆರೆದಿರಿಸುತ್ತದಲ್ಲದೆ, ಜೊತೆಜೊತೆಗೆ, ಅವುಗಳನ್ನು ಅಭಿವೃದ್ಧಿ ಪಡಿಸಿದ, ಸಂರಕ್ಷಿಸಿದ ನೇಗಿಲಯೋಗಿಗಳ ದೂರದರ್ಶಿತ್ವವನ್ನು ಅರ್ಥಮಾಡಿಸುತ್ತದೆ. ಮೋಟಾರು ವಾಹನಗಳಿಲ್ಲದ ಆ ಕಾಲದಲ್ಲಿ ದೂರ ಪ್ರಯಾಣಕ್ಕಾಗಿಯೇ ಅಭಿವೃದ್ಧಿಗೊಂಡಂತಿರುವ ನಾಗೋರಿ ತಳಿಯ ವೇಗ, ಶಕ್ತಿ ಸಾಮರ್ಥ್ಯಗಳು ಈ ತಳಿ ಅಭಿವೃದ್ಧಿ ಪಡಿಸಿದ ಅನಕ್ಷರಸ್ಥ ವಿಜ್ಞಾನಿಗಳ ಸಾಮರ್ಥ್ಯಕ್ಕೊಂದು ಉದಾಹರಣೆ.



ನಾಗೋರಿಯ ಮೂಲ ಜೊಧ್‌ಪುರ್ ಎಂದು ಕರೆಯಲ್ಪಡುತ್ತಿದ್ದ ಇಂದಿನ ರಾಜಸ್ಥಾನ. ಗಿಡ್ಡ ಕೊಂಬಿನ ದೊಡ್ಡ ಡುಬ್ಬದ ಬೂದು ಬಣ್ಣದ ಹೋರಿ ನಾಗೋರಿ ರಾಜಸ್ಥಾನದ ಕಡುಬಿಸಿಲಿನ ಸುಡುಮರಳಿನ ನೆಲದಲ್ಲಿ ಸುಲಭವಾಗಿ ಮತ್ತು ಅತೀ ಶೀಘ್ರವಾಗಿ ಕ್ರಮಿಸಬಲ್ಲ ತನ್ನ ಸಾಮರ್ಥ್ಯದಿಂದ ಗ್ರಾಮ ಗ್ರಾಮಗಳ ಸಂಪರ್ಕ ವ್ಯವಸ್ಥೆಯಲ್ಲಿ ಬಿಡಿಸಲಾರದ ನಂಟನ್ನು ಹೊಂದಿದೆ. ಇಡೀ ಕುಟುಂಬವನ್ನೆ ಹೊತ್ತ ಕಬ್ಬಿಣದ ಗಾಲಿಗಳುಳ್ಳ ಗಾಡಿಗಳನ್ನು ಅದೊಂದು ಭಾರವೇ ಅಲ್ಲವೇನೊ ಎಂಬಂತೆ ಶೀಘ್ರವಾಗಿ ಎಳೆಯುತ್ತಿರುವ ನಾಗೋರಿ ರಾಜಸ್ಥಾನದಲ್ಲಿ ಕಾಣಬರುವ ಸಾಮಾನ್ಯ ದೃಶ್ಯ.



ನಾಗೋರಿ, ಮಧ್ಯಪ್ರದೇಶ

ನಾಗೋರಿಯ ದೈಹಿಕ ಲಕ್ಷಣಗಳೆಂದರೆ ಉದ್ದ ಮುಖ, ಚಪ್ಪಟೆ ಹಣೆ, ಪುಟ್ಟ ಕಣ್ಣುಗಳ ಮೇಲೆ ಜೋತುಕೊಂಡಂತಿರುವ ಕಣ್ರೆಪ್ಪೆ, ದೊಡ್ಡ ಕಿವಿ ಇತ್ಯಾದಿ. ನಾಗೋರಿ ತಳಿಯ ಹಸುಗಳು ತುಲನಾತ್ಮಕವಾಗಿ ಸ್ವಲ್ಪ ಸೌಮ್ಯ, ಆದರೆ ಹೋರಿಗಳು ಹೆಚ್ಚು ಒರಟ, ಏಕಾಂಗಿ ಪ್ರವೃತ್ತಿಯವು. "ನಾಗೋರಿ ಹೋರಿಗಳು ತುಂಬಾ wild, ಗೋಶಾಲೆಗೆ ಬಂದು ಐದು ವರ್ಷಗಳಾದರೂ ಇನ್ನೂ ಯಾರಿಗೂ ಮುಟ್ಟಗೊಡುತ್ತಿಲ್ಲ" ಎನ್ನುತ್ತಾರೆ ನಾಗೋರಿಯೊಂದಿಗೆ ಬಹಳ ಕಾಲದಿಂದ ಒಡನಾಡುತ್ತಿರುವ ಹೊಸನಗರ ಅಮೃತಧಾರ ಗೋಶಾಲೆಯ ಅರುಣಶಂಕರ ನೆಟ್ಟಾರ್. ಕುದುರೆಯ ಹಾಗೆ ಓಡಬಲ್ಲ ಶ್ರಮಿ ನಾಗೋರಿ ಸರ್ಕಾರ ತೋರುತ್ತಿರುವ ಅಂಕಿಅಂಶಗಳಷ್ಟಿಲ್ಲ, ನಾಗೋರಿ ಸಾಕುತ್ತಿದ್ದಾರೆ ಎಂದು ಹೇಳುತ್ತಿರುವ ಜಾಗಗಳಲ್ಲಿ ಕುರಿ, ಹಂದಿ ಸಾಕುತ್ತಿದ್ದಾರೆ. ಇವುಗಳ ಉಳಿವಿಗೆ ಸಾಕಷ್ಟು ಕ್ರಮ ಕೈಗೊಂಡಿಲ್ಲ ಎಂಬ ಖೇದ, ಕಾಳಜಿ ಅವರದ್ದು.

Global warming, ಖಾಲಿಯಾಗುತ್ತಿರುವ ಇಂಧನ ಕಣಜ, ಪರಿಸರ ನಾಶ ಇವೆಲ್ಲವೂ ಸಂಪೂರ್ಣ ಅಳಿವಿಗೆ ಮುಂಚೆಯೆ ನಾಗೋರಿಯನ್ನು ಮತ್ತೆ ಪ್ರಸ್ತುತತೆಗೆ ತರಲಿವೆಯೆ?

– ಮಧುಕೇಶ ದೊಡ್ಡೇರಿ

ಮೂಲ : ನಾಗ್ಪುರ – ರಾಜಸ್ಥಾನ.
ವಿಭಾಗ : ಕೆಲಸಗಾರ ತಳಿ.
ಬಣ್ಣ : ಬಿಳಿ, ಬೂದು.
ಕಣ್ಣು : ಬಿಳಿ ರೆಪ್ಪೆ.
ಕಿವಿ : ಒಳಭಾಗ ಕೆಂಪು ಬಣ್ಣ.
ಮೂತಿ : ಕಪ್ಪು.
ಕೊಂಬು : ಕಪ್ಪು.
ಗೊರಸು : ಕಪ್ಪು.

# ಸುಸಂಸ್ಕೃತ ಮಜ್ಜಿಗೆಯೂ ನಮ್ಮ ಸಂಸ್ಕೃತಿಯೂ...

**ಅಮೆರಿಕದಲ್ಲಿ ಕೂತು 'ಸುಸಂಸ್ಕೃತ' ಮಜ್ಜಿಗೆ ಕುಡಿಯುವ ಅನಿವಾಸಿ ಕನ್ನಡಿಗರೊಬ್ಬರಿಂದ ಮಜ್ಜಿಗೆ ಬಗ್ಗೆ ಒಂದು ಲಹರಿ.**

ಅಮೆರಿಕದಲ್ಲಿ ಗ್ರೋಸರಿ ಸೂಪರ್‌ಮಾರ್ಕೆಟ್‌ಗಳಲ್ಲಿ ಮಜ್ಜಿಗೆ ಮಾರಾಟಕ್ಕಿರುತ್ತದೆ. ಅದರ ಪ್ಯಾಕೆಟ್ ಅಥವಾ ಕಾರ್ಟನ್‌ನ ಮೇಲೆ ಕಲ್ಚರ್‍ಡ್ ಬಟರ್‌ಮಿಲ್ಕ್ ಎಂದು ಲೇಬಲ್ ಅಚ್ಚಾದದ್ದಿರುತ್ತದೆ. ತಮಾಷೆಗೆ ನಾನದನ್ನು ಪದಶಃ ಭಾಷಾಂತರಿಸಿ ಸುಸಂಸ್ಕೃತ ಮಜ್ಜಿಗೆ ಎನ್ನುತ್ತೇನೆ. ವಾಸ್ತವವಾಗಿ ಕಲ್ಚರ್‍ಡ್ ಮಜ್ಜಿಗೆ ಎಂದರೆ ಹಾಲಿಗೆ ಬ್ಯಾಕ್ಟೀರಿಯಾ ಕಲ್ಚರ್‌ಗಳನ್ನು ಸೇರಿಸಿ ತಯಾರಿಸಿದ ಮಜ್ಜಿಗೆ ಎಂದರ್ಥ. ಸ್ಟ್ರೆಪ್ಟೊಕಾಕಸ್ ಲಾಕ್ಟಿಸ್ ಮತ್ತು ಲ್ಯಾಕ್ಟೋಕಾಕಸ್ ಲಾಕ್ಟಿಸ್ ಎಂಬ ಎರಡು ಬ್ಯಾಕ್ಟೀರಿಯಮ್‌ಗಳು ಹಾಲಿನಲ್ಲಿ ಬೆರೆತಾಗ ಆಗುವ ಜೀವರಾಸಾಯನಿಕ ಕ್ರಿಯೆಯ ಉತ್ಪನ್ನವೇ ಕಲ್ಚರ್‍ಡ್ ಮಜ್ಜಿಗೆ. ಅದಕ್ಕೆ ಸುಸಂಸ್ಕೃತ ಮಜ್ಜಿಗೆ ಎಂದು ನಾನು ಹೆಸರಿಟ್ಟದ್ದು ಅದನ್ನು ಮೆಚ್ಚಿಕೊಂಡು ಎಂದೇನಲ್ಲ; ಆ ಮಜ್ಜಿಗೆಗೆ ಒಂಥರಾ ಘಾಟು ಇರುತ್ತದೆ, ಹೇಳಿಕೊಳ್ಳುವಂಥ ರುಚಿಯೂ ಏನಿಲ್ಲ. ಆದರೆ ನಮ್ಮ ಭಾರತೀಯ ಸಂಸ್ಕೃತಿಯ ಮಜ್ಜಿಗೆಯನ್ನು, ಅಥವಾ ಮಜ್ಜಿಗೆಯ ಮೂಲಕ ಭಾರತೀಯ ಸಂಸ್ಕೃತಿಯನ್ನು ನೆನಪಿಸುವಂಥ ಒಂದು ಪದಾರ್ಥ ಇಲ್ಲಿ ಅಮೆರಿಕದಲ್ಲೂ ಸಿಗುತ್ತದಲ್ಲ ಆ ಖುಶಿಯಿಂದಷ್ಟೇ ನಾನು ಸುಸಂಸ್ಕೃತ ಮಜ್ಜಿಗೆ ಎಂದು ನಾಮಕರಣ ಮಾಡಿರುವುದು.




ಅಮೆರಿಕದ ಸುಸಂಸ್ಕೃತ ಮಜ್ಜಿಗೆಯ ಸಂಗತಿ ಅದಾದರೆ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಜ್ಜಿಗೆ ಹೇಗೆ ಹಾಸುಹೊಕ್ಕಾಗಿದೆಯೆಂಬುದನ್ನು ಗಮನಿಸಿದರೆ ಮಜ್ಜಿಗೆಯ ಬಗ್ಗೆ ತುಂಬ ಹೆಮ್ಮೆಯೆನಿಸುತ್ತದೆ. ಅಂಥದೊಂದು ಮಜ್ಜಿಗೆ ಅವಲೋಕನ ನಿಮಗಾಗಿ ಇಲ್ಲಿದೆ. ಹೇಗೂ ಈಗ ಬಿಸಿಲ ಝಳ, ತಡೆಯಲಾರದಷ್ಟು ಸೆಕೆ. ಹಾಗಾಗಿ ಒಂದು ಲೋಟ ಮಜ್ಜಿಗೆ ಕುಡಿದು ದೇಹ-ಮನಸ್ಸುಗಳೆರಡನ್ನೂ ಒಟ್ಟಿಗೇ ತಂಪಾಗಿಸಿಕೊಂಡರೆ ಒಳ್ಳೆಯದೇ ಅಲ್ಲವೆ?

ಹಾಲಿಗೆ ಹೆಪ್ಪು ಹಾಕಿ ಮಾರನೆದಿನ ಬೆಳ್ಳಂಬೆಳಿಗ್ಗೆ ಆ ಮೊಸರನ್ನು ಕಡಗೋಲಿಂದ ಕಡೆದು ಮಜ್ಜಿಗೆ ಮಾಡುವುದು ಹಿಂದಿನ ಕಾಲದಿಂದಲೂ (ದ್ವಾಪರಯುಗದಲ್ಲಿ ನಂದಗೋಕುಲದಿಂದ ಮೊದಲ್ಗೊಂಡು ಇರಬಹುದು) ನಡೆದುಬಂದಿರುವ ಪದ್ಧತಿ. ಹಳ್ಳಿಯ ಮನೆಗಳಲ್ಲಿ ಮನೆಯೊಡತಿಯ ಅಥವಾ ಹಿರಿಯ ಹೆಂಗಸರ ದಿನಚರಿ ಆರಂಭವಾಗುವುದೇ ಮೊಸರು ಕಡೆದು ಮಜ್ಜಿಗೆ ಮಾಡುವ ಕ್ರಿಯೆಯ ಮೂಲಕ. ಅದನ್ನು ಲಯಬದ್ಧವಾಗಿಸಲು ರಂಗನಾಯಕ ರಾಜೀವ ಲೋಚನ ರಮಣನೆ ಬೆಳಗಾಯಿತೇಳೆನ್ನುತ... ಎಂದೋ ಏಳು ನಾರಾಯಣನೆ ಏಳು ಲಕ್ಷ್ಮೀರಮಣ... ಎಂದೋ ಉದಯರಾಗದ ಹಾಡು. ಹಿಂದೆಲ್ಲ ಮಜ್ಜಿಗೆಯ ವಿಷಯದಲ್ಲಿ ಎಷ್ಟೊಂದು ಧಾರ್ಮಿಕ ಭಾವ, ಪಾವಿತ್ರ್ಯ ಇರುತ್ತಿತ್ತೆಂದರೆ ಅಮಾವಾಸ್ಯೆಯಂದು ಮಜ್ಜಿಗೆ ಮಾಡಬಾರದೆಂಬ ನಂಬಿಕೆ. ಶ್ರಾದ್ಧದ ದಿನ ಮಧ್ಯಾಹ್ನದವರೆಗೆ ಮೊಸರು ಕಡೆಯುವ ಹಾಗಿಲ್ಲ. ಈಗ ಕಡಗೋಲು ಅಟ್ಟ ಸೇರಿದೆ. ಮಜ್ಜಿಗೆ ಮಾಡಲಿಕ್ಕೆ ವಿದ್ಯುತ್‌ಚಾಲಿತ ಯಂತ್ರ ಬಂದಿದೆ. ಲೋಡ್‌ಶೆಡ್ಡಿಂಗ್ ವೇಳಾಪಟ್ಟಿಯನ್ನನುಸರಿಸಿ ಮೊಸರು ಕಡೆಯಬೇಕಾಗುವುದರಿಂದ ಅದು ಸುಪ್ರಭಾತ ಸಮಯದಲ್ಲೇ ಆಗಬಹುದೆಂದೇನಿಲ್ಲ.

ಹಳ್ಳಿಯಾದರೂ ದಿಲ್ಲಿಯಾದರೂ ಮನೆಗಳಲ್ಲಿ ಮಜ್ಜಿಗೆ ಇದ್ದೇ ಇರುತ್ತದೆ. ಅಮೆರಿಕದಲ್ಲಿರುವ ಭಾರತೀಯರಲ್ಲೂ ಬಹಳಷ್ಟು ಮಂದಿ (ಮುಖ್ಯವಾಗಿ ದಕ್ಷಿಣಭಾರತ ಮೂಲದವರು) ಮೊಸರು/ಮಜ್ಜಿಗೆ ಮಾರುಕಟ್ಟೆಯಿಂದ ಕೊಂಡುಕೊಳ್ಳುವುದಕ್ಕಿಂತ ಮನೆಯಲ್ಲೇ ಹಾಲಿಗೆ ಹೆಪ್ಪು ಹಾಕಿ ಮಾಡುತ್ತಾರೆ. ಭಾರತದಿಂದ ಬರುವಾಗ ತವರೂರಿನ ಹಚ್ಚಗಿನ ಬೆಚ್ಚನೆಯ ನೆನಪುಗಳೊಂದಿಗೆ ಒಂದು ಚಿಕ್ಕ ಡಬ್ಬಿಯಲ್ಲಿ ಮೊಸರು ಸಹ ವಿಮಾನ ಪ್ರಯಾಣ ಮಾಡಿ ಸಪ್ತಸಾಗರಗಳನ್ನು ದಾಟಿ ಇಲ್ಲಿಗೆ ಬಂದಿರುತ್ತದೆ. ಇಲ್ಲಿನ ಹಾಲಿಗೆ ಭಾರತದ ಹೆಪ್ಪು ಹಾಕಿ ಅದರಿಂದಾದ ಮೊಸರನ್ನು ಸ್ನೇಹಿತೆಯರಿಗೂ ಹಂಚಿ ಅವರ ಮನೆಗಳಲ್ಲೂ ಭಾರತದಿಂದ ತಂದ ಹೆಪ್ಪಿನ ಮೊಸರು ಸಿದ್ಧವಾಗುತ್ತದೆ. ಕಳೆದ ವರ್ಷ ನನ್ನ ಅಣ್ಣ-ಅತ್ತಿಗೆ ಇಲ್ಲಿಗೆ ಬಂದವರು ಇಂಗ್ಲೇಂಡ್‌ಗೆ ವಾಪಸಾಗುವಾಗ ನಮ್ಮನೆಯಿಂದ ಹೆಪ್ಪು ಒಯ್ದಿದ್ದರು!

ಹಾಲಿಗೆ ಹೆಪ್ಪು ಹಾಕಿ ಮೊಸರು/ಮಜ್ಜಿಗೆ ಮಾಡುವುದು; ಮರುದಿನ ಆ ಮಜ್ಜಿಗೆಯ ಕೆಲ ಹನಿಗಳನ್ನು (ಹೆಪ್ಪು) ಹಾಲಿಗೆ ಹಾಕಿ ಮತ್ತೆ ಮೊಸರು/ಮಜ್ಜಿಗೆ ಮಾಡುವುದು- ಇದೊಂಥರ ನಿರಂತರ ಆವರ್ತನವಾಗುತ್ತ ಹೋಗುವ ಪ್ರಕ್ರಿಯೆ. ಇವತ್ತಿನ ಹೆಪ್ಪಿನಿಂದ ನಾಳೆ ಮಜ್ಜಿಗೆ. ನಾಳೆ ಅದು ಹೆಪ್ಪಾಗಿ ನಾಡಿದ್ದಿನ ಮಜ್ಜಿಗೆ! ಕೋಳಿ ಮೊದಲೋ ಮೊಟ್ಟೆ ಮೊದಲೋ ಅಥವಾ ಬೀಜ ಮೊದಲೋ ಸಸಿ ಮೊದಲೋ ಎಂದಂತೆಯೇ ಇದು ಕೂಡ. ಹಾಗಾದರೆ ಹೆಪ್ಪಿನ ನವೀಕರಣ ಹೇಗೆ ಮಾಡುವುದು? ವರ್ಷವಿಡೀ ಅನೂಚಾನವಾಗಿ ಬಂದ ಮಜ್ಜಿಗೆ-ಹೆಪ್ಪು-ಮಜ್ಜಿಗೆ-ಹೆಪ್ಪು ಸರಪಳಿಯನ್ನು ವರ್ಷಕ್ಕೊಮ್ಮೆ ಹೇಗೆ ನವೀಕರಿಸುವುದು? ಅದಕ್ಕೊಂದು ಕ್ರಮ ಇದೆ, ಕರಾವಳಿಯ ಕೆಲ ಪ್ರದೇಶಗಳಲ್ಲಿ ಅದು ರೂಢಿಯಲ್ಲಿದೆ (ನಮ್ಮೂರಲ್ಲಿ, ನಮ್ಮ ಮನೆಯಲ್ಲಂತೂ ಇದೆ. ಇತರರೂ ಇದನ್ನು ಅನುಸರಿಸುತ್ತಿರಬಹುದು). ಅಕ್ಟೋಬರ್ ತಿಂಗಳ ಆಸುಪಾಸಿನಲ್ಲಿ ಹದಿನಾಲ್ಕು ದಿನಗಳು ಸ್ವಾತಿ ಮಹಾನಕ್ಷತ್ರದ ಅವಧಿ ಎಂದು ಗುರುತಿಸಲ್ಪಡುತ್ತದೆ. ಆ ಸಮಯದಲ್ಲಿ ಮಳೆನೀರನ್ನು ಸಂಗ್ರಹಿಸಬೇಕು. ಅಂಗಳದಲ್ಲಿ ಎತ್ತರದ ಸ್ಟೂಲ್ ಮೇಲೆ ಬೋಗುಣಿಯನ್ನೋ ಅಗಲ ಬಾಯಿಯ ಬೇರಾವುದೇ ಪಾತ್ರೆಯನ್ನೋ ಇಟ್ಟು ಮಳೆನೀರು ಸಂಗ್ರಹಿಸಿದರೆ ಒಳ್ಳೆಯದು. ಸುಮಾರು ಅರ್ಧ ಬೋಗುಣಿ ಸ್ವಾತಿಮಳೆ ನೀರಿಗೆ ಅಷ್ಟೇ ಪ್ರಮಾಣದಲ್ಲಿ ಬಿಸಿಮಾಡಿ ಆರಿಸಿದ ಹಾಲನ್ನು ಸೇರಿಸಿಡಬೇಕು. ಎರಡು ದಿನಗಳ ನಂತರ ಆ ಪಾತ್ರೆಯಲ್ಲಿ ಹದವಾದ

ಮೊಸರಾಗಿರುತ್ತದೆ; ತಿನ್ನಲಿಕ್ಕೆ ರುಚಿರುಚಿ ಆಗಿರಲಾರದಾದರೂ ಹೆಪ್ಪಾಗಿ ಉಪಯೋಗಿಸುವುದಕ್ಕೆ ಯೋಗ್ಯವಾಗಿರುತ್ತದೆ.

ಈ ಪದ್ಧತಿ ಮೂಢನಂಬಿಕೆಯಿಂದ ಬಂದದ್ದಲ್ಲ. ಇದಕ್ಕೆ ವೈಜ್ಞಾನಿಕ ಪುಷ್ಟೀಕರಣವನ್ನೂ ಕೊಡಬಹುದು. ಸ್ವಾತಿ ನಕ್ಷತ್ರದ ಅವಧಿಯಲ್ಲಿ, ಅಂದರೆ ಅಕ್ಟೋಬರ್ ಆಸುಪಾಸಿನಲ್ಲಿ ಮುಂಗಾರು ಮಳೆ ಕೊನೆಗೊಳ್ಳುವಾಗ ಗುಡುಗು-ಮಿಂಚುಗಳ ಆರ್ಭಟ ಇದ್ದೇ ಇರುತ್ತದೆ. ಮಿಂಚು ಉಂಟಾದಾಗ ವಾತಾವರಣದಲ್ಲಿನ ಸಾರಜನಕ (ನೈಟ್ರೋಜನ್) ಮಿಂಚಿನ ಶಾಖೋತ್ಪತ್ತಿಯಿಂದಾಗಿ ನೈಟ್ರೇಟ್ ಆಗಿ ಪರಿವರ್ತಿತವಾಗುತ್ತದೆ. ನೈಟ್ರೇಟ್ ಕರಗಿದ ಮಳೆ ನೀರಿಗೆ ವಿಶೇಷ ಆಮ್ಲೀಯ ರಾಸಾಯನಿಕ ಗುಣವಿರುತ್ತದೆ. ಹಾಲನ್ನು ಮೊಸರಾಗಿಸುವ ಶಕ್ತಿಯಿರುತ್ತದೆ. ಸ್ವಾತ್ಯಾಂ ಸಾಗರಶುಕ್ತಿಮಧ್ಯಪತಿತಂ ತನ್ಮೌಕ್ತಿಕಂ ಜಾಯತೆ... ಎಂಬ ಸುಭಾಷಿತ ಸಾಲಿನಲ್ಲಿ ಹೇಳಿದಂತೆ ಸ್ವಾತಿ ನಕ್ಷತ್ರದಲ್ಲಿ ಮಳೆನೀರು ಸಮುದ್ರಚಿಪ್ಪಿನೊಳಗೆ ಬಿದ್ದರೆ ಮುತ್ತು ಆಗುತ್ತದೆ ಎಂಬುದರ ಹಿಂದಿನ ವೈಜ್ಞಾನಿಕ ಸತ್ಯವೂ ಅದೇ!

ಮಜ್ಜಿಗೆ, ಬೇಸಗೆಯಲ್ಲಿ ತಂಪು ಕೊಡುವ ಆರೋಗ್ಯಕರ ಪಾನೀಯ. ಕೋಕ್-ಪೆಪ್ಸಿಗಳು ನೀಡಲಾರದ ತಂಪಿನ ಸಂತೃಪ್ತಿಯನ್ನು ಚಿಟಿಕೆ ಉಪ್ಪು ಸೇರಿಸಿದ ಒಂದು ಲೋಟ ಮಜ್ಜಿಗೆ ಕೊಡಬಲ್ಲುದು. ಬೇಸಗೆಯಲ್ಲಿ ನಡೆಯುವ ಸಂಗೀತೋತ್ಸವಗಳು, ಆಟೋಟ ಪಂದ್ಯಗಳು, ಹೊರಸಂಚಾರಗಳಿಗೆ ಒಂದು ವಿಶಿಷ್ಟ ಕಳೆಯನ್ನು ಮಜ್ಜಿಗೆ ತರಬಲ್ಲುದು. ಹಸಿಮೆಣಸು-ಶುಂಠಿ-ಕೊತ್ತಂಬರಿಗಳ ಹದವಾದ ಮಿಶ್ರಣ ಸೇರಿಸಿ ಮಸಾಲೆಮಜ್ಜಿಗೆ ವಿತರಿಸಿದರೆ ನೆರೆದ ಜನಸ್ತೋಮಕ್ಕೆ ಅಮೃತ ಕುಡಿದಂತಾಗುವುದರಲ್ಲಿ ಅನುಮಾನವಿಲ್ಲ. ಇನ್ನು, ಊಟೋಪಚಾರದಲ್ಲಂತೂ ಮಜ್ಜಿಗೆಹುಳಿ ಅಥವಾ ಹಶಿ (ಉತ್ತರಕನ್ನಡ-ಶಿವಮೊಗ್ಗ ಪ್ರದೇಶಗಳಲ್ಲಿ ತಯಾರಿಸುವ ತಂಬುಳಿಯ ವಿಧ) ಇದ್ದರೆ ಅದರ ವೈಭವವೇ ಬೇರೆ! ಬಾಯಲ್ಲಿ ನೀರೂರಿಸುವ ಬಾಳಕ ಮೆಣಸಿನಕಾಯಿ ಮಾಡುವುದಕ್ಕೂ ಮಜ್ಜಿಗೆ ಬೇಕೇಬೇಕು. ಹಸಿ ಮೆಣಸಿನಕಾಯಿ ಸ್ವಲ್ಪವೇ ಸೀಳು ಮಾಡಿ ಮಸಾಲೆ ತುಂಬಿಸಿ ಮಜ್ಜಿಗೆಯಲ್ಲಿ ಅದ್ದಿ ತೆಗೆದು ಬಿಸಿಲಲ್ಲಿ ಒಣಗಿಸಿಟ್ಟರೆ ಮಳೆಗಾಲದ ದಿನಗಳಲ್ಲಿ ಧೋ ಎಂದು ಮಳೆ ಸುರಿಯುತ್ತಿರುವಾಗ ಊಟದ ವೇಳೆ ಕರಿದು ತಿನ್ನಲು ಅದೆಷ್ಟು ರುಚಿ!

ಮಜ್ಜಿಗೆ ಕುಡಿಯಲು ಎಷ್ಟು ರುಚಿಕರ ಮತ್ತು ಹಿತಕರವೋ ಅಷ್ಟೇ ಔಷಧೀಯ ಗುಣಗಳನ್ನೂ ಹೊಂದಿದೆ. ಡಯಾಬಿಟಿಸ್ ಮತ್ತು ಹೈಪರ್‌ಟೆನ್ಷನ್ ಕಾಯಿಲೆಯವರಿಗೆ ಮಜ್ಜಿಗೆ (ಉಪ್ಪು ಸಕ್ಕರೆ ಇತ್ಯಾದಿ ಸೇರಿಸದೆ) ತುಂಬ ಒಳ್ಳೆಯದು. ದೊಡ್ಡದೊಡ್ಡ ಕಾರ್ಖಾನೆಗಳಲ್ಲಿ, ಕುಲುಮೆಗಳ ಸಮೀಪದ ಬಿಸಿ ವಾತಾವರಣದಲ್ಲಿ ಕೆಲಸ ಮಾಡುವವರು ಡೀಹೈಡ್ರೇಶನ್ ಮತ್ತು ಸ್ನಾಯುಹಿಡಿತಗಳಾಗುವುದನ್ನು ತಪ್ಪಿಸಲು ಆಗಾಗ ಮಜ್ಜಿಗೆ ಕುಡಿಯುತ್ತಿರುವುದು ಒಳ್ಳೆಯದು. ಅಂತೆಯೇ ಕಡುಬೇಸಿಗೆಯಲ್ಲಿ ಸನ್‌ಸ್ಟ್ರೋಕ್ ಅಥವಾ ಹೀಟ್‌ಸ್ಟ್ರೋಕ್ ಆಗುವುದನ್ನೂ ಮಜ್ಜಿಗೆ ಸೇವನೆ ಗಣನೀಯ ಪ್ರಮಾಣದಲ್ಲಿ ತಗ್ಗಿಸಬಲ್ಲದು. ಇನ್ನು, ಉತ್ತರಕರ್ನಾಟಕದ ಪ್ರದೇಶಗಳಲ್ಲಿ ಚಿಕನ್‌ಪಾಕ್ಸ್, ಗಜಿಕರ್ಣ ಮುಂತಾದ ರೋಗ ಬಂದಾಗ ಪಥ್ಯದ ಆಹಾರವಾಗಿ ಹಸಿ ಈರುಳ್ಳಿ, ಜೋಳದ ನುಚ್ಚು ಮತ್ತು ಮಜ್ಜಿಗೆ ಕೊಡುತ್ತಾರೆ. ಸಕ್ಕರೆ ಕಾಯಿಲೆಯಿದ್ದವರೂ ಮಜ್ಜಿಗೆಯಲ್ಲಿ ಜೋಳದ ನುಚ್ಚನ್ನು ಬೇಯಿಸಿ ಸೇವಿಸುತ್ತಾರೆ. ಅದೆಲ್ಲ ಬಿಡಿ, ಮನುಷ್ಯರಿಗಷ್ಟೇ ಅಲ್ಲ, ಕರಿಬೇವಿನ ಗಿಡಕ್ಕೂ ಮಜ್ಜಿಗೆ (ಚಿಟಿಕೆ ಇಂಗು ಬೆರೆಸಿ) ಹಾಕಿದರೆ ಎಲೆಗಳಿಗೆ ಹುಳ ಹಿಡಿಯುವುದಿಲ್ಲ ಎಂದು ಕಂಡುಕೊಂಡಿದ್ದಾರೆ ಹಳ್ಳಿಗಳ ಜನರು! ಅಂತೂ ಮಜ್ಜಿಗೆ ಮಹಿಮೆ ಅಷ್ಟಿಷ್ಟಲ್ಲ ಎಂದು ಗೊತ್ತಾಯಿತಲ್ಲ?

ಆದರೂ ಒಂದು ವಿಚಾರವನ್ನು ನೀವು ಗಮನಿಸಿದ್ದೀರಾ? ಮಜ್ಜಿಗೆ ನಮ್ಮ ದೈನಂದಿನ ಆಹಾರಪದ್ಧತಿ ಮತ್ತು ಆರೋಗ್ಯ-ಸಂಸ್ಕೃತಿಗಳಲ್ಲಿ ಇಷ್ಟೆಲ್ಲ ಹಾಸುಹೊಕ್ಕಾಗಿದ್ದರೂ ಇತರ ಹೈನು ಪದಾರ್ಥಗಳಾದ ಹಾಲು, ಮೊಸರು, ಬೆಣ್ಣೆ ಮತ್ತು ತುಪ್ಪಗಳಿಗೆ ಹೋಲಿಸಿದರೆ ಮಜ್ಜಿಗೆಗೆ ಸಂದಿರುವ ಮರ್ಯಾದೆ ಕಡಿಮೆ ಅಂತನಿಸುವುದಿಲ್ಲವೆ? ದೇವರ ಪೂಜೆಯ ಷೋಡಶೋಪಚಾರಗಳಲ್ಲಿ ಹಾಲು-ಮೊಸರು-ಬೆಣ್ಣೆ-ತುಪ್ಪಗಳ ಉಲ್ಲೇಖ ಬರುತ್ತದಾದರೂ ಮಜ್ಜಿಗೆಯ ಪ್ರಸ್ತಾಪವಿಲ್ಲ! ವಿರಾಗಿಯಾಗಿ ದಿಗಂಬರನಾಗಿ ನಿಂತ ಗೋಮಟೇಶ್ವರನಿಗೂ ಮಹಾಮಸ್ತಕಾಭಿಷೇಕದ ವೇಳೆ ಹಾಲು, ತುಪ್ಪ, ಮೊಸರುಗಳ ಅಭ್ಯಂಜನ ಇರುತ್ತದೆ; ಉಡುಪಿ ಕೃಷ್ಣನಿಗೆ ನವನೀತ (ಬೆಣ್ಣೆ) ಅಲಂಕಾರ ಇರುತ್ತದೆ; ನಾಗಪ್ಪನಿಗೆ ಪಂಚಮಿಯಂದು ಹಾಲು ಎರೆಯುವ ಕ್ರಮ ಇದೆ; ಹೋಮಹವನಾದಿಗಳಲ್ಲಿ ಅಗ್ನಿಗೆ ಹವಿಸ್ಸು-ಸಮಿಧೆಗಳನ್ನು ತುಪ್ಪದಲ್ಲಿ ಅದ್ದಿಯೇ ಅರ್ಪಿಸಲಾಗುತ್ತದೆ. ಆದರೆ ಮಜ್ಜಿಗೆ ಅದೇನು ಪಾಪ ಮಾಡಿದೆಯೋ... ದೇವಾನಾಂಪ್ರಿಯ ಎಂದು ಅದು ಕರೆಯಿಸಿಕೊಂಡದ್ದೇ ಇಲ್ಲ! ಪುರಂದರದಾಸರು ಕೂಡ ಭಾಗ್ಯದ ಲಕ್ಷ್ಮಿ ಬಾರಮ್ಮಾ... ಕೀರ್ತನೆಯಲ್ಲಿ ಹೆಜ್ಜೆಯ ಮೇಲೆ ಹೆಜ್ಜೆ... ಗೆಜ್ಜೆಯ ಕಾಲ್ಗಳ ನಾದ... ಸಜ್ಜನಸಾಧು ಪೂಜೆ... ಇತ್ಯಾದಿ ದ್ವಿತೀಯಾಕ್ಷರ ಪ್ರಾಸಬದ್ಧವಾಗುವಂತೆ ಮಜ್ಜಿಗೆಯನ್ನು ಉಪಯೋಗಿಸಿದ್ದಾರೆಯೇ ವಿನಹ ಕೊನೆಗೆ ಅವರೂ ಲಕ್ಷ್ಮಿಯನ್ನು ಹೋಲಿಸಿದ್ದು ಮಜ್ಜಿಗೆಯೊಳಗಿನ ಬೆಣ್ಣೆಗೆ!

ಆದರೆ ಕಲ್ಚರ್ಡ್ ಬಟರ್‌ಮಿಲ್ಕ್ ಬಳಸುವ ಅಮೆರಿಕನ್ನರ ಸಂಸ್ಕೃತಿಯಲ್ಲಿ ಮಜ್ಜಿಗೆಯ ರೆಫ಼ರೆನ್ಸ್ ನೋಡಿದರೆ ನಿರಾಶೆಯಾಗುವುದಿಲ್ಲ. ನ್ಯೂಯಾರ್ಕ್ ಬಂದರಿನ ಒಂದು ಕಾಲುವೆಗೆ (ಬ್ರೂಕ್‌ಲಿನ್ ಮತ್ತು ಗವರ್ನರ್ಸ್ ಐಲ್ಯಾಂಡ್ ನಡುವಿನ ಜಲಮಾರ್ಗ) ಬಟರ್‌ಮಿಲ್ಕ್ ಚಾನೆಲ್ ಎಂಬ ಹೆಸರಿದೆ. ೧೭ನೇ ಶತಮಾನದಲ್ಲೇ ಈ ನಾಮಕರಣವಾಗಿದೆಯಂತೆ. ಡಚ್ ಗೊಲ್ಲತಿಯರು ಮಜ್ಜಿಗೆ ಮಾರಲು ದೋಣಿಗಳಲ್ಲಿ ಆ ಕಾಲುವೆಯ ಮೂಲಕ ಹೋಗುತ್ತಿದ್ದರಂತೆ. ನ್ಯೂಯಾರ್ಕ್ ರಾಜ್ಯದಲ್ಲೇ ಬಟರ್‌ಮಿಲ್ಕ್ ಫಾಲ್ಸ್ ಎಂಬ ಸುಂದರ ಜಲಪಾತವೂ ಇದೆ. ಮಜ್ಜಿಗೆಯನ್ನು ಕಡೆಯುವಾಗಿನ ನೊರೆಯಂತೆ ಅಲ್ಲಿ ನೀರು ಹರಿಯುವುದರಿಂದ ಆ ಹೆಸರು.

ಅಂತೂಇಂತೂ ಇವತ್ತು ಮಜ್ಜಿಗೆಯ ಮೇಲೋಗರವನ್ನು ಸವಿದವರಾದಿರಿ ನೀವು! ಈಗ ಮಜ್ಜಿಗೆಯನ್ನು ಬಣ್ಣಿಸುವ ಒಂದು ಸಂಸ್ಕೃತ ಸುಭಾಷಿತದೊಂದಿಗೆ ಈ ಮಜ್ಜಿಗೆಯಾಖ್ಯಾನವನ್ನು ಮುಗಿಸೋಣ. ಘೃತಂ ನ ಶ್ರೂಯತೇ ಕರ್ಣೇ ದಧಿ ಸ್ವಪ್ನೇಪಿ ದುರ್ಲಭಮ್... ಮುಗ್ಧೇ ದುಗ್ಧಸ್ಯ ಕಾ ವಾರ್ತಾ ತಕ್ರಂ ಶಕ್ರಸ್ಯ ದುರ್ಲಭಮ್... ಎಂಬ ಶ್ಲೋಕ. ಮನೆಯಲ್ಲಿ ಹೈನು ಪದಾರ್ಥಗಳಿಗೆ ತತ್ವಾರ ಎಷ್ಟಿದೆಯೆಂಬುದನ್ನು ಬಡವನೊಬ್ಬ ತನ್ನ ಹೆಂಡತಿಯೊಂದಿಗೆ ತೋಡಿಕೊಳ್ಳುವ ಸನ್ನಿವೇಶ. ತುಪ್ಪ ಎಂದರೇನೆಂದು ಕೇಳಿಯೇ ಗೊತ್ತಿಲ್ಲ. ಮೊಸರನ್ನು ಕನಸಲ್ಲೂ ಕಂಡಿಲ್ಲ. ಹಾಲಿನ ಸಮಾಚಾರವೇನನ್ನು ಹೇಳಲಿ ಮುಗ್ಧೆಯೇ, ಮಜ್ಜಿಗೆಯೂ ನನ್ನ ಪಾಲಿಗೆ ಇಂದ್ರಪದವಿಯಷ್ಟು ದುರ್ಲಭವಾಗಿದೆ.... ಎಂಬ ಗೋಳು.

**- ಶ್ರೀವತ್ಸ ಜೋಶಿ, ವಾಷಿಂಗ್ಟನ್ ಡಿಸಿ**

ಪುಟ 2 ರಿಂದ

# ಎರಡನೆಯ ಸ್ವಾತಂತ್ರ್ಯ ಸಂಗ್ರಾಮ ಕೊನೆಯದು ಕೂಡ ಆಗಲಿ

ನಂತರದ ಸರದಿ ಕೈಗಾರಿಕಾ ಕ್ರಾಂತಿಯದ್ದು ಹಾಗೂ ಇತ್ತೀಚೆಗಿನ ಮಾಹಿತಿ ತಂತ್ರಜ್ಞಾನದ್ದು. ಈ ಎಲ್ಲ ಕ್ರಾಂತಿಗಳ ಪರಿಣಾಮವಾಗಿ ಜನರು ನಗರಗಳ ಕಡೆಗೆ ದೌಡಾಯಿಸತೊಡಗಿದರು. ಹೊಸಹೊಸ ಉದ್ಯೋಗಾವಕಾಶಗಳು ತೆರೆದುಕೊಳ್ಳುತ್ತಿದ್ದ ಕಾಲ ಅದು. ನಗರ ನಿರಾಸೆಗೊಳಿಸಲಿಲ್ಲ, ಕೈ ಬೀಸಿ ಕರೆಯಿತು. ಇಂದಿನ ಪೀಳಿಗೆ ಎಲ್ಲೇ ಜನಿಸಲಿ, ನಗರಕ್ಕೆ ಕಳಿಸಲು ಹುಟ್ಟಿದಾರಭ್ಯ ಸಿದ್ಧತೆ ಆರಂಭವಾಗುತ್ತದೆ. ಹಾಗಾಗಿ ಇಂದಿನ ಜನಾಂಗಕ್ಕೆ ಗ್ರಾಮ, ಕೃಷಿ, ದನ-ಕರು, ಊರಿನಲ್ಲೊಂದು ಮನೆ, ಕಡೆಗೆ ಅಪ್ಪ-ಅಮ್ಮ ಏನೂ ಬೇಕಾಗಿಲ್ಲ. ಇದೆಲ್ಲದರ ಪರಿಣಾಮವಾಗಿ ಮುಂದಿನ ಪೀಳಿಗೆ ಕಾಳು-ಕಡ್ಡಿ-ತರಕಾರಿ-ಸೊಪ್ಪು-ಸದೆಗಳು ಅಂಗಡಿಯಲ್ಲೇ ಸಿಗುವಾಗ ವ್ಯವಸಾಯ ಏತಕ್ಕೆ? ಹಾಲು ಪೊಟ್ಟಣಗಳಲ್ಲಿ ಸಿಗುವಾಗ ದನ-ಕರುಗಳನ್ನು ಏಕೆ ಸಾಕಬೇಕು? ಎಂದು ಕೇಳಿದರೂ ಆಶ್ಚರ್ಯವಿಲ್ಲ.

ಕೃಷಿ ವಿದೇಶೀ ವಿಧಾನವನ್ನು ಅನುಸರಿಸಿದ್ದೇ ಮುಳುವಾಯಿತೇನೋ ಎಂದೆನಿಸುತ್ತಿದೆ. ಕೃಷಿಕರ ಪರಿಸ್ಥಿತಿ ಅಡಕತ್ತರಿಯಲ್ಲಿ ಸಿಕ್ಕಿಕೊಂಡಂತಾಗಿದೆ. ಒಂದು ಕಡೆ ಭೂಮಿ ಸಾರ ಕಳೆದುಕೊಳ್ಳುತ್ತಿದೆ, ಮತ್ತೊಂದು ಕಡೆಯಲ್ಲಿ ಬೀಜದಿಂದ ಹಿಡಿದು ಬೇಕಾಗಿರುವ ಪ್ರತಿಯೊಂದು ಪದಾರ್ಥಕ್ಕೂ ಬಹುರಾಷ್ಟ್ರೀಯ ಕಂಪನಿಗಳನ್ನು ದೇಹಿ ಎಂದು ಬೇಡುವಂತಾಗಿದೆ, ಅದರ ಮಧ್ಯದಲ್ಲಿ ತೀರಿಸಲಾಗದ ಸಾಲದ ಹೊರೆ. ರೈತನಿಗೆ ಇದಕ್ಕೆಲ್ಲ ಪರಿಹಾರ ಬೇಕು, ಇಲ್ಲದಿದ್ದರೆ ಸಾವೇ ಗತಿ.

ಮತ್ತೆ ನಗರಗಳದ್ದೂ ಅದೇ ಪರಿಸ್ಥಿತಿ. ಎಗ್ಗಿಲ್ಲದ ವಲಸೆಯಿಂದಾಗಿ ಉಸಿರುಗಟ್ಟಿಸುವ ವಾತಾವರಣ ಉಂಟಾಗಿದೆ. ಉದ್ಯೋಗ ದಾಸ್ಯ ಅಸಹ್ಯ ತರಿಸುತ್ತಿದೆ. ಗ್ರಾಮ, ನಗರ ಎರಡೂ ಪರಿಹಾರ ಸಿಗಬಹುದೇನೋ ಎಂದು ಕಣ್ಣರಳಿಸಿ ಕೂತಿವೆ.

ಅಂದು ಗಾಂಧೀ ಚರಕದಿಂದ ಇಡೀ ಭಾರತವನ್ನು ಒಂದಾಗಿ ನೇಯ್ದು ಸ್ವಾತಂತ್ರ್ಯ ತಂದುಕೊಟ್ಟರು. ಆದರೆ ಅದನ್ನು ದಕ್ಕಿಸಿಕೊಳ್ಳಲಾಗಲಿಲ್ಲ. ಹಾಗಾಗಿ ಇದು ಎರಡನೇ ಪ್ರಯತ್ನ ಹಾಗೂ ಕೊನೆಯದು ಕೂಡ ಆಗಲಿ ಎಂಬ ಆಶಯವೂ ಇದೆ. ಅಂದರೆ ಮುಂದೆ ಇಂಥ ದುರ್ಭರ ದಿನಗಳಿಗೆ ಆಸ್ಪದವನ್ನೇ ಕೊಡದಿರುವ ದಾರಿ ಇದಾಗಲಿದೆ.

ಹೌದು, ಇದು ಎರಡನೇ ಸ್ವಾತಂತ್ರ್ಯ ಸಂಗ್ರಾಮ. ಸರ್ವದೇವಮಯೀ ಗೋಮಾತೆಯೇ ಇದರ ನೇತೃತ್ವವನ್ನು ವಹಿಸಲಿದ್ದಾಳೆ. ಜನ್ಮಕೊಟ್ಟ ತಾಯಿಗೂ ಹಾಲುಣಿಸುವ ಈ ಗೋಮಾತೆ ನಮ್ಮೆಲ್ಲರ ಆಶಾಕಿರಣವಾಗಿದ್ದಾಳೆ. ಈ ಶುಭಕಾರ್ಯದ ಮಂಗಳ ಸಮಾಚಾರವನ್ನು ಅವಳು ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ದ್ವಾರಾ ನಾಡಿನ ಸಮಸ್ತ ನರನಾಡಿಗಳಲ್ಲಿ ಬಿತ್ತಲಿದ್ದಾಳೆ. ಇದಕ್ಕಾಗಿ ಗೋಪ್ರೇಮಿಗಳೆಲ್ಲರೂ ಒಗ್ಗೂಡಿದ್ದಾರೆ ಎನ್ನುವುದೇ ಸಂತಸದ ಸಂಗತಿ.

– **ಭಾರತೀಶ**



## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ೨೦ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com